ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಯೋವಿ/ಆರ್‌ಆರ್‌ಆರ್‌ಎಲ್‌ಎಫ್/2016ಪ್ರ/2016-17

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು-560 001,
ದಿನಾಂಕ: 17-08-2016.

: ಪ್ರಕಟಣೆ :

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನ ಗ್ರಂಥಾಲಯಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಹಾಗೂ ಆರ್‌ಆರ್‌ಆರ್‌ಎಲ್‌ಎಫ್ ಸಮಪಾಲುನಿಧಿ ಯೋಜನೆಯಡಿ 2016 ರಲ್ಲಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗೆ ಸಲ್ಲಿಸುವ ಬಗ್ಗೆ.

*****

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನ ಗ್ರಂಥಾಲಯಗಳಿಗೆ 2016-17ನೇ ಸಾಲಿನ ಯೋಜನಾ ಆಯವ್ಯಯದಲ್ಲಿ ನಿಗದಿಪಡಿಸಲಾದಂತೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆಯಡಿಯಲ್ಲಿ 227 ಗ್ರಂಥಾಲಯಗಳಿಗೆ ಹಾಗೂ ಆರ್‌ಆರ್‌ಆರ್‌ಎಲ್‌ಎಫ್ ಸಮಪಾಲುನಿಧಿ ಯೋಜನೆಯಡಿಯಲ್ಲಿ (ಆಂಗ್ಲ ಪುಸ್ತಕಗಳು ಮಾತ್ರ) 176 ತಾಲ್ಲೂಕು ಗ್ರಂಥಾಲಯಗಳಿಗೆ 2016 ರಲ್ಲಿ ಪ್ರಕಟಣೆಯಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ವಿಷಯಕ್ಕೆ ಸಂಬಂಧಿಸಿದ ಕನ್ನಡ ಹಾಗೂ ಆಂಗ್ಲ ಭಾಷಾ ಮಸ್ತಕಗಳನ್ನು ಖರೀದಿಸಲು ಲೇಖಕ, ಲೇಖಕ-ಪ್ರಕಾಶಕ, ಪ್ರಕಟಣ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು ಆಯ್ಕೆಗೆ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಆಯ್ಕೆಗೆ ಸಲ್ಲಿಸಲಾಗುವ ಪುಸ್ತಕಗಳು ಈ ಕೆಳಗಿನ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

1. ಪುಸ್ತಕಗಳು 2016ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು.

2. ಪುಸ್ತಕದ ಶೀರ್ಷಿಕೆ, ಗ್ರಂಥಕರ್ತರ ಹೆಸರು, ಪ್ರಕಾಶಕರ ಹೆಸರು, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇದೆ. ಪ್ರಸ್ತುತ ವರ್ಷದಲ್ಲಿಯೇ ಕೃತಿ ಮೊದಲ ಮುದ್ರಣವಾಗಿದೆ ಎಂಬ ಬಗ್ಗೆ ಸುಳ್ಳು ಮಾಹಿತಿ ನೀಡಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

3. ಮೂವತ್ತೆರಡು ಪುಟಕ್ಕಿಂತ ಕಡಿಮೆ ಪುಟಗಳಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು (ಮಕ್ಕಳ ಪುಸ್ತಕಕ್ಕೆ ಅನ್ವಯಿಸುವುದಿಲ್ಲ)

4. ಲೇಖಕರೇ ಪ್ರಕಾಶಕರಾಗಿದ್ದಲ್ಲಿ ಅವರೇ ಅರ್ಜಿ ಸಲ್ಲಿಸಬೇಕು.

5. ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

6. ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು.

7. ಆಯ್ಕೆಗೆ ಒಪ್ಪಿಸಿದ ಯಾವುದೇ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.

8. ನಮೂನೆ ನಿಯಮಿತ ಅರ್ಜಿಯಲ್ಲಿ (ಅರ್ಜಿ ನಮೂನೆಯು ಯೋಜನಾ ವಿಭಾಗ, ನಿರ್ದೇಶಕರ ಕಛೇರಿ ಹಾಗೂ ರಾಜ್ಯದ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತದೆ) ಸ್ವಲಿಖಿತ ಅರ್ಜಿಯಲ್ಲಿ 1. ಪುಸ್ತಕದ ಶೀರ್ಷಿಕೆ, 2. ಲೇಖಕರ ಹೆಸರು ಖಾಯಂ ಮತ್ತು ಅಂಚೆ ವಿಳಾಸ, 3. ಪ್ರಕಾಶಕರ ಹೆಸರು ಮತ್ತು ಪೂರ್ಣ ವಿಳಾಸ (ಪುಸ್ತಕದ ಹಕ್ಕು ಹೊಂದಿರುವ ಬಗ್ಗೆ ಮಾಹಿತಿ ಒದಗಿಸುವುದು) 4. ಪ್ರಕಾಶಕರು ಕೆ.ಎಸ್.ಟಿ.ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ, ಹಾಗಿದ್ದಲ್ಲಿ ಕೆ.ಎಸ್.ಟಿ.ಸಂಖ್ಯೆಯನ್ನು ನಮೂದಿಸುವುದು. 5. ಪುಸ್ತಕದ ಹಕ್ಕು (ದಾಖಲಾತಿ ಒದಗಿಸುವುದು) 6. ಪ್ರಥಮ ಮುದ್ರಣದ ವರ್ಷ 7. ಪುಸ್ತಕದ ಮುಖ ಬೆಲೆ, (ಸ್ಪಷ್ಟವಾಗಿ ಮುದ್ರಿತಗೊಂಡಿರಬೇಕು, ತಿದ್ದಿದಲ್ಲಿ, ಸ್ಟಿಕರ್ ಅಂಟಿಸಿದಲ್ಲಿ, ಅಂತಹ ಪುಸ್ತಕಗಳನ್ನು ಪರಿಗಣಿಸುವುದಿಲ್ಲ) 8. ಸಾಮಾನ್ಯ ಪ್ರತಿ / ಉತ್ತಮ ಪ್ರತಿ, 9. ಪುಟ ಸಂಖ್ಯೆ, ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸುವುದು.
9. ಆಯ್ಕೆಯಾದ ಕನ್ನಡ ಪುಸ್ತಕಗಳಿಗೆ ಸರ್ಕಾರ ನಿಗದಿಪಡಿಸಿದ ಬೆಲೆಯ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸಲಾಗುವುದು.
10. ಪುಸ್ತಕ ಸ್ವೀಕೃತಿಯನ್ನು ಯೋಜನಾ ವಿಭಾಗ, ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮುಖಾಂತರ ದಿನಾಂಕ: 25-09-2016 ಸಂಜೆ 5-30ರ ಒಳಗಾಗಿ ತಲುಪುವಂತೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯುವುದು. ತದನಂತರ ಬಂದ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸಲಾಗುವುದಿಲ್ಲ.
11. ಆಯ್ಕೆಗಾಗಿ ಸಲ್ಲಿಸುವ ಗ್ರಂಥಗಳ ಶೀರ್ಷಿಕೆ ಪುಟದ ಹಿಂಭಾಗದ ಪುಟದಲ್ಲಿ (imprint page) ಈ ಕೆಳಗಿನ ಅಂಶಗಳನ್ನು ಮುದ್ರಿಸುವುದು ಕಡ್ಡಾಯವಾಗಿರುತ್ತದೆ. ಶೀರ್ಷಿಕೆ, ಲೇಖಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಪುಟಗಳು, ಪುಸ್ತಕದ ಅಳತೆ, ಉಪಯೋಗಿಸಿರುವ ಕಾಗದ, ಬೆಲೆ, ವರ್ಷಗಳು, ಮುಖಪುಟ, ವಿನ್ಯಾಸ, ಒಳಪುಟ, ರೇಖಾಚಿತ್ರ, ಪ್ರಕಾಶಕರು ಮತ್ತು ಮುದ್ರಕರು ಅವರ ವಿಳಾಸಗಳನ್ನು ಮುದ್ರಿಸಿರಬೇಕು.

ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು

1. ಪುಸ್ತಕದ ಒಂದು ಪ್ರತಿ
2. ಕೃತಿಯು ಪ್ರಥಮ ಮುದ್ರಣ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು.
3. ಶಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿ ನೋಂದಾಯಿಸಿದ ಆಯಾ ಕಾಲಕ್ಕೆ ನವೀಕರಿಸಿದ ನೋಂದಣಿ ಪತ್ರದ ದೃಢೀಕೃತ ನಕಲುಪ್ರತಿ. (ಲೇಖಕ, ಲೇಖಕ-ಪ್ರಕಾಶಕರಿಗೆ ಅನ್ವಯಿಸುವುದಿಲ್ಲ)
4. ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ ನೋಂದಾಯಿಸಲ್ಪಟ್ಟ ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿ. (ಲೇಖಕ, ಲೇಖಕ-ಪ್ರಕಾಶಕರಿಗೆ ಅನ್ವಯಿಸುವುದಿಲ್ಲ)
5. ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ದೃಢೀಕೃತ ನಕಲುಪ್ರತಿ.
6. ಪ್ಯಾನ್ ಕಾರ್ಡ್‌ನ ದೃಢೀಕೃತ ನಕಲುಪ್ರತಿ.
7. ಆಧಾರ್ ಕಾರ್ಡ್‌ನ ದೃಢೀಕೃತ ನಕಲುಪ್ರತಿ.

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ರು: RRRLF/Ten.Book list.Paper Noti.

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಯೋವಿ/ಆರ್‌ಆರ್‌ಆರ್‌ಎಲ್‌ಎಫ್/24/2016ಪ್ರ/2016-17
4458

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು-560 001,
ದಿನಾಂಕ: 17-08-2016.

-:ಸುತ್ತೋಲೆ:-

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನ ಗ್ರಂಥಾಲಯಗಳಿಗೆ 2016-17ನೇ ಸಾಲಿನ ಯೋಜನಾ ಆಯವ್ಯಯದಲ್ಲಿ ನಿಗದಿಪಡಿಸಲಾದಂತೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆಯಡಿಯಲ್ಲಿ 227 ಗ್ರಂಥಾಲಯಗಳಿಗೆ ಹಾಗೂ ಆರ್‌ಆರ್‌ಆರ್‌ಎಲ್‌ಎಫ್ ಸಮಪಾಲುನಿಧಿ ಯೋಜನೆಯಡಿಯಲ್ಲಿ (ಆಂಗ್ಲ ಪುಸ್ತಕಗಳು ಮಾತ್ರ) 176 ತಾಲ್ಲೂಕು ಗ್ರಂಥಾಲಯಗಳಿಗೆ 2016 ರಲ್ಲಿ ಪ್ರಕಟಣೆಯಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ವಿಷಯಕ್ಕೆ ಸಂಬಂಧಿಸಿದ 2016ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಕನ್ನಡ ಹಾಗೂ ಆಂಗ್ಲ ಭಾಷಾ ಪುಸ್ತಕಗಳನ್ನು ಖರೀದಿಸಲು ಗ್ರಂಥಗಳ ಆಯ್ಕೆಗಾಗಿ ಲೇಖಕ, ಲೇಖಕ-ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳಿಂದ ಪುಸ್ತಕಗಳನ್ನು ಆಹ್ವಾನಿಸಿರುವ ಬಗ್ಗೆ ಪ್ರಕಟಣಾ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಸದರಿ ಪ್ರಕಟಣೆಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಅಳವಡಿಸುವುದು ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರಲು ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

17/8/16
ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

ರಾಜ್ಯದ ಎಲ್ಲಾ /ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಉಪ ನಿರ್ದೇಶಕರು/ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ರು: RRRLF/Ten.Book list.Paper Noti